ವಿಜಯ ಕರ್ನಾಟಕ twitter.com/vijaykarnataka facebook.com/vijaykarnataka

ಉಕ್ಕಿನ ಮೇಲುರಸ್ತೆ ಕೈಬಿಡಿ ಸಮೂಹ ಸಾರಿಗೆಗೆ ಒತ್ತು ನೀಡಿ

ಬೆಂಗಳೂರು ಉಳಿಸಿ ಸಮಿತಿ ಸುಧಾಮರಿ ವಿಷ್ಣು ಜಾ. ಮ.ವಿ. ರಾಮೋತ್ತಂ ಮಾತನಾಡಿದರು.

ಬೆಂಗಳೂರು ಉಳಿಸಿ ಸಮಿತಿ ಒತ್ತಾಯ

ಸಮಿತಿಯಿಂದ ಸಚಿವ ಸಾರ್ವಜನಿಕ ಸಭೆ

ಎಲಿವೇಟೆಡ್ ಕಾರಿಡಾರ್ ಹಾಗೂ ಉಕ್ಕಿನ ಮೇಲುರಸ್ತೆ ಯೋಜನೆಗಳಿಗೆ ಸರ್ಕಾರ ಮಾಡಿರುವ ಹಣವನ್ನು ಮೆಟ್ರೊ ಮೂರು ಹಂತಗಳಿಗೆ ಒಟ್ಟು ನೀಡಿ.

-ಸಂದೀಪ್ ದ್ವಾರಕನಾಥ್, ಮುಖ್ಯಸ್ಥರು, ಬೆಂ.ಮೆ.ರೈ.ನಿ.

ಮುಂದು ಮೆಟ್ರೊ

ಬಿಜೆಪಿ ಸಂಸ್ಥೆಯ ಟ್ರಸ್ಟಿ ಶಾಶ್ವತಿ ಚಾಮರಾಜ್ ಮಾತನಾಡಿ, "ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಿಲೋಮೀಟರ್‌ಗೆ ₹ 9,000 ಕೋಟಿ ರೂ., ರಾಜ್ಯದಲ್ಲಿ ₹ 600 ಕೋಟಿ ರೂ., ಬಿಬಿಎಂಪಿ ₹ 300 ಕೋಟಿ ರೂ. ವೆಚ್ಚವಾಗುತ್ತದೆ. ಉಕ್ಕಿನ ಮೇಲುರಸ್ತೆ ಹಾಗೂ ಎಲಿವೇಟೆಡ್ ಕಾರಿಡಾರ್ ಯೋಜನೆಗಳಿಗೆ ವೆಚ್ಚವನ್ನು ಅಂದಾಜಿಸಿದ್ದೇವೆ. ಆದರೆ ಈ ಎರಡು ಕಿಲೋಮೀಟರ್‌ಗಳಿಗೆ ವೆಚ್ಚವನ್ನು ಅಂದಾಜಿಸಿಲ್ಲ. ಸರಕಾರ ಅಂತಹ ಯಾವ ಯೋಜನೆಗಳಿಗೆ ಮುಂದು ಮೆಟ್ರೊ ಮಾಡುತ್ತದೆ," ಎಂದರು.

10 ಸಾವಿರ ಮರಗಳು ಬಲಿ

"ಎಲಿವೇಟೆಡ್ ಕಾರಿಡಾರ್ ಯೋಜನೆ ಕಡಿಮೆ ಅವಧಿಯಲ್ಲಾಗುತ್ತದೆಯಾದರೂ ಯೋಜನಾ ವೆಚ್ಚ ಹೆಚ್ಚಿದೆ. ಈ ಕಾರಿಡಾರ್ ನಿರ್ಮಾಣಗೊಂಡರೆ ಮಾರ್ಗದಲ್ಲಿ 10 ಸಾವಿರ ಮರಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ನೀರಿನ ಪೈಪ್, ಕೇಬಲ್ ಸ್ಥಳಾಂತರಕ್ಕೂ ಹಣ ಹೆಚ್ಚು ಖರ್ಚಾಗಲಿದೆ," ಎಂದು ವಿಷ್ಣು ಜಾ.ಮ.ವಿ. ರಾಮೋತ್ತಂ ತಿಳಿಸಿದರು.

ಬಿಎಂಟಿಸಿ ಸಾರಿಗೆ ಪ್ರಭಾಕರ್ ಎಂಬುವರು ಸಾರ್ವಜನಿಕ ಅಭಿಪ್ರಾಯ ಜಾ. ಆಲಿಕೆ ಮಾಡಿದರು. "ನಗರದಲ್ಲಿ ಪ್ರಸ್ತುತ ಇರುವ ಮೂಲಸೌಕರ್ಯ ಸುಧಾರಣೆ ಮಾಡಿ. ಉದಾಹರಣೆಗೆ 2.5 ಕೋಟಿ ಚದರ ಮೀಟರ್ ರಸ್ತೆಯ ಜಾಗ. ಪ್ರಸ್ತುತ ಪ್ರಯಾಣಿಕರು 31.18 ಲಕ್ಷ ಚದರ ಮೀಟರ್ ರಸ್ತೆಯ ಜಾಗವನ್ನು ಆಕ್ರಮಿಸಿಕೊಂಡಿದ್ದಾರೆ. ಬಸ್‌ಗಳು 1.87 ಲಕ್ಷ ಚದರ ಮೀಟರ್ ಜಾಗವನ್ನು ಆಕ್ರಮಿಸುತ್ತವೆ. ಸಮೂಹ ಸಾರಿಗೆಯ ಮುಂದೆ ಸಂಚಾರ ದಟ್ಟಣೆ, ಮಾಲಿನ್ಯ ಮೊದಲಾದ ಸಮಸ್ಯೆಗಳನ್ನು ಕಡಿಮೆ ಮಾಡಬಹುದು. ಹೊಸ ಯೋಜನೆಗಳನ್ನು ಕಲ್ಪಿಸುವ ಬದಲು ಈಗಾಗಲೇ ಇರುವ ಸಮೂಹ ಸಾರಿಗೆಯನ್ನು ಅಭಿವೃದ್ಧಿ ಪಡಿಸಬೇಕು," ಎಂದು ಸಲಹೆ ನೀಡಿದರು.

ಬಿಎಂಟಿಸಿ ಪ್ರಯಾಣಿಕರ ಹಿತರಕ್ಷಣಾ ಸಮಿತಿ ಸದಸ್ಯ ಕುಮಾರ್ ಜಾನ್, ಯುವಕಿಂ ಫೌಂಡೇಷನ್ ಗಣಪತಿ ಭಾಮಿ ಕೆಂಚ್, ಜಾ. ಗೋವಿಂದರಾಜು ಮಾತನಾಡಿದರು.